ಗ್ರಾನೈಟ್ ಕಲ್ಲುಗಳನ್ನು ಅಕ್ರಮವಾಗಿ ತೆಗೆಯುತ್ತಿರುವುದು

೨೪೩ (ಎ) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).— ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಬಯಮಿಟ್ಟು ಉತ್ತರಿಸುವರೇ ?

ಅ) ಗ್ರಾನೈಟ್ ಕಲ್ಲುಗಳ ಲೂಟಿಯಿಂದಾಗಿ ನಿರ್ಗ ಸಂಪತ್ತಿನ ನಾಶ ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಆ) ಅಕ್ರಮವಾಗಿ ಗ್ರಾನೈಟ್ ಕಲ್ಲುಗಳನ್ನು ತೆಗೆಯುತ್ತಿರುವವರ ಮೇಲೆ ಇದೂವರೆಗೆ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಮತ್ತು ಕಾರ್ಮಿಕರ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಉಚ್ಚನ್ಯಾಯಾಲಯದ ತೀರ್ಪಿನಿಂದಾಗಿ ಕೆಲವರು ಗ್ರಾನೈಟ್ ಶಿಲೆಗಳನ್ನು ತೆಗೆಯುತ್ತಿದ್ದು ಸರ್ಕಾರವು ಈ ತೀರ್ಪಿನಿಂದಾಗಿ ಕ್ರಮ ಕೈಗೆದುಕೊಳ್ಳಲು ಮಧ್ಯ ಪ್ರವೇಶ ಮಾಡದಂತಾಗಿದೆ. ಆದರೂ ಸಹ ಈಗಾಗಲೇ ವಿಭಾಗೀಯ ಪೀಠಕ್ಕೆ ಸರ್ಕಾರವು ಮೇಲ್ಮನವಿ ಸಲ್ಲಿಸಿದ್ದು ಅಲ್ಲಿನ ತೀರ್ಪಿಗಾಗಿ ಕಾಯಲಾಗಿದೆ.

ಆ) ಸರ್ಕಾರವು ಗ್ರಾನೈಟ್ ಶಿಲೆಗಳನ್ನು ತೆಗೆಯಲು ಪ್ರಯತ್ನಿಸಿದ ಖಾಸಗಿ ವ್ಯಕ್ತಿಗಳ ವಿರುದ್ಧ ಈಗಾಗಲೇ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಧಾರ್ಮಿಕ ಸ್ಥಳಗಳಾದ ಶಿವಗಂಗೆ, ಮಹದೇಶ್ವರಬೆಟ್ಟ, ಬಿಳಿಗಿರಿರಂಗನ ಬೆಟ್ಟ, ಶ್ರೀರಾಮದೇವಸ್ಥಾನ, ಈ ಧಾರ್ಮಿಕ ಕ್ಷೇತ್ರದಲ್ಲಿ ಕಲ್ಲುಗಳನ್ನು ತೆಗೆಯುವುದು ತಮ್ಮ ಗಮನಕ್ಕೆ ಬಂದಿದೆಯೇ ? ಅದನ್ನು ತಾವು ಬದಲಾವಣೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಗಣಿ ಮಂತ್ರಿ ಭೂ ವಿಜ್ಞಾನದ ಆಕ್ಟನ್ನು ತಿದ್ದುಪಡಿ ಮಾಡಿ ಇದುವರೆಗೆ ಅಕ್ರಮ ಮಾಡಿದ ಯಾವ ಗಣಿ ಮಾಲೀಕರ ಮೇಲೆ ಕ್ರಮ ಕೈಗೊಂಡಿದ್ದೀರಿ ? ಯಳಂದೂರು ತಾಲ್ಲೂಕಿನಲ್ಲಿ ಅಕ್ರಮವಾಗಿ ಗಣಿ ಮಾಲೀಕರ ಮೇಲೆ ಸರ್ಕಾರ ಕೇಸನ್ನು ಹಾಕಿದಾಗ ಅದನ್ನು ಬದಲಾವಣೆ ಮಾಡಿ 'ಬಿ' ರಿಪೋರ್ಟ್ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಇದುವರೆಗೂ ವಿದೇಶಗಳಿಗೆ ಕಳುಹಿಸಿರತಕ್ಕ ಕಲ್ಲುಗಳ ಪ್ರಮಾಣ ಎಷ್ಟು ?

ಶ್ರೀ ಬಿ. ಶಿವಣ್ಣ.— ಮಾನ್ಯ ಅಧ್ಯಕ್ಷರೆ. ಧಾರ್ಮಿಕ ಕ್ಷೇತ್ರಗಳಲ್ಲಿ ಯಾವುದೂ ಇಲ್ಲ. ಧಾರ್ಮಿಕ ಕ್ಷೇತ್ರಗಳಿಗೆ ಗ್ರಾನೈಟ್ ಆಗಲಿ ಅಥವಾ ಗಣಿ ತೆಗೆಯುವುದಾಗಲಿ ಇಲ್ಲ. ಹಾಗೇನಾದರೂ ಇದ್ದರೆ ಹೇಳಿ ವಿಚಾರ ಮಾಡುತ್ತೇನೆ. ಎರಡನೆಯದಾಗಿ ಹೊರದೇಶಗಳಿಗೆ ಹೋದಂಥ ಗ್ರಾನೈಟ್ ೯೭,೬೨೦ ಘನ ಮೀಟರ್ ಅದರ ಮೌಲ್ಯ೫೦ ಲಕ್ಷ ರೂಪಾಯಿಗಳು. ನಮ್ಮ ಹತ್ತಿರ ಇರುವುದು ಒಟ್ಟು ೯೦ ಗಣಿಗಳು ಮಂಗಳೂರು ಬಂದರಿನ ಹತ್ತಿರ ತನಿಖೆ ಮಾಡುವುದಕ್ಕೆ ಎರಡು ಚಕ್‌ಪೋಸ್ಟ್‌ಗಳಂ ಇಟ್ಟಿದ್ದೇವೆ. ಈ ಪ್ರಕಾರವಾಗಿ ನಮ್ಮ ಇಲಾಖೆಯವರು ಇಲ್ಲೀಗಲ್ ಆಗಿ ಯಾವುದೇ ಪರ್ಮಿಟ್ ಕೊಟ್ಟಿಲ್ಲ. ಕೆಲವು ಕೇಸುಗಳನ್ನು ಅಲ್ಲಲ್ಲಿ ಹಾಕಿದ್ದೇವೆ. ಶಿವಮೊಗ್ಗ, ಕುಂದಾಪುರ, ಬೆಂಗಳೂರು ಮುಂತಾದ ಕಡೆಗಳಲ್ಲಿ ಕೇಸ್‌ಗಳನ್ನು ಹಾಕಿದ್ದೇವೆ.

ಶ್ರೀ ವಾಟಾಳ್ ನಾಗರಾಜ್.—ಇಲ್ಲಿ ತಿಳಿಸಿರುವಂತೆ ಕಲ್ಲುಗಳನ್ನು ಇದುವರೆಗೆ ತೆಗೆದು ಹಾಕಿದ್ದಾರೆಂದು ಹೇಳಿದ್ದಾರೆ. ಮಂಗಳೂರು ಬಂದರಿನ ಹತ್ತಿರ ಚಕ್‌ಪೋಸ್ಟ್ ಇದೆ ಎಂದು ಹೇಳುತ್ತಾರೆ. ಇಡೀ ಕರ್ನಾಟಕದ ಮೂಲೆಯಿಂದ ಪ್ರತಿದಿನ ಮಂಗಳೂರಿಗೆ ನೂರು ಲಾರಿಗಳು ಬಂದು ಹೋಗುತ್ತಿವೆ. ತಾವು ದಯಮಾಡಿ ಪ್ರವಾಸ ಮಾಡಿನೋಡಿ ೧೦೦ ಎಕರೆ ಪ್ರದೇಶದಿಂದ ಕನಿಷ್ಟ ೨ ಸಾವಿರ ಕೋಟಿ ರೂಪಾಯಿಗಳ ಕಲ್ಲುಗಳು ವಿದೇಶಕ್ಕೆ ಹೋಗುತ್ತಿದೆ. ಇದುವರೆವಿಗೂ ೪೦ ಸಾವಿರ ಕೋಟಿ ರೂಪಾಯಿಗಳ ಕಲ್ಲು ಹೋಗಿದೆ.

ಶ್ರೀ ಬಿ. ಶಿವಣ್ಣ.— ೪೦ ಸಾವಿರ ಕೋಟಿ ರೂಪಾಯಿ ಕಲ್ಲು ಹೋಗಿಲ್ಲ. ೨ ಚಕ್‌ಪೋಸ್ಟ್ ಮಂಗಳೂರು ಬಂದರಿನ ಹತ್ತಿರ ಇದೆ. ಎಲ್ಲಿ ಅವಶ್ಯಕತೆ ಬೇಕೋ ಅಲ್ಲಿ ಚಕ್‌ಪೋಸ್ಟ್‌ಗಳನ್ನು ಓಪನ್ನು ಮಾಡುವುದು ಸರ್ಕಾರದ ಪರಿಶೀಲನೆಯಲ್ಲಿದೆ. ಗ್ರಾನೈಟ್ ಪಾಲಿಸಿಯನ್ನು ನಾವು ತಯಾರು ಮಾಡುತ್ತೇವೆ.

ಶ್ರೀ **ವಾಟಾಳ್ ನಾಗರಾಜ್**.— ಪ್ರಸಾದ್ ಗ್ರಾನೈಟ್ ಸುಳ್ಳು ಪ್ರಮಾಣ ಪತ್ರವನ್ನು ನೀಡಿ ವ್ಯವಹಾರ ಮಾಡುತ್ತಿದ್ದಾರೆ. ಉಪ ವಿಭಾಗಾಧಿಕಾರಿ, ಕೇಸ್ ಹಾಕಿದರೂ ಕೂಡ ಈಗ 'ಬಿ' ರಿಪೋರ್ಟ್ ಹಾಕಿಸಿದ್ದಾರೆ.

ಅಧ್ಯಕ್ಷರೆ.— ತಾವು ಮಹದೇಶ್ವರ ಬೆಟ್ಟಕ್ಕೆ ಹೋಗುತ್ತಿರುತ್ತೀರಿ, ತಾವು ನೋಡಬಹುದು. ೫ ಕಿ.ಮೀ. ದೂರದಲ್ಲಿ ಈ ಕಲ್ಲುಗಳನ್ನು ತೆಗೆಯುತ್ತಿದ್ದಾರೆ. ಹಾಗೇಯೇ ಬಿಳಿಗಿರಿ ರಂಗನ ಬೆಟ್ಟದ ಹತ್ತಿರ ಈ ರೀತಿ ನಡೆಯುತ್ತಿದೆ. ಅಲ್ಲಿ ದೇವಸ್ಥಾನದ ಅರ್ಚಕರು ಹೇಳುತ್ತಾರೆ ಲಿಂಗದ ಕಲ್ಲು ಅದುರುತ್ತದೆ ಎಂದು ಹೇಳುತ್ತಾರೆ. ಹಗಲು ದರೋಡೆ ನಡೆಯುತ್ತಿದೆ. ಈಗ ತಾವು ಈ ವಿಷಯದ ಬಗ್ಗೆ ದಯವಿಟ್ಟು ಅರ್ಧ ಗಂಟೆ ಮಾತನಾಡಲು ಚರ್ಚೆಗೆ ಅವಕಾಶ ಕೊಡಿ.

ಶ್ರೀ ಬಿ. ಶಿವಣ್ಣ.— ಸರ್ಕಾರ ೧೯೭೯—೮೦ರಲ್ಲಿ ಒಂದು ರೂಲ್ ಮಾಡಿದೆ. ಆ ಪ್ರಕಾರ ಯಾವುದೇ ಗ್ರಾನೈಟ್ ಇರಲಿ, ಅದು ಸರ್ಕಾರಕ್ಕೆ ಕೊಡಬೇಕೆ ಹೊರತು ಪ್ರೈವೇಟ್ ಜನರು ಮಾಡಲಿಕ್ಕೆ ಬರುವುದಿಲ್ಲ. ಕೆಲವು ಜನರು ಹೈಕೋರ್ಟಿಗೆ ಹೋಗಿ ಇದಕ್ಕೆ ಸ್ಟೇ ತಂದರು ಅದು ಕಂಟಿನ್ಯೂ ಆಗಿದೆ. ಅದು ಕೋರ್ಟಿನಲ್ಲಿದೆ. ಗ್ರಾನೈಟ್ ಪಾಲಿಸಿ ಬಂದಮೇಲೆ ಎಲ್ಲಾ ಸರಿಹೋಗುತ್ತದೆ.

ಶ್ರೀ ಹೆ. ಜೆ. ಆರ್. ಸಿಂಧ್ಯ.— ಬಡ್ಜೆಟ್ ಭಾಷಣದಲ್ಲಿ ಗ್ರಾನೈಟ್ ಸಾಗಾಣಿಕೆಯ ಬಗ್ಗೆ ಸರ್ಕಾರ ವಿಶೇಷವಾದ ನೀತಿಯನ್ನು ಮುಂದೆ ತರುತ್ತೇವೆಂದು ಹೇಳಿದ್ದಾರೆ. ಅದನ್ನು ನಾವು ಸ್ವಾಗತ ಮಾಡಿದ್ದೇವೆ. ಅಲ್ಲಿಯವರೆಗೂ ಸಹಿತ ಗ್ರಾನೈಟ್ ಕಲ್ಲು ಅಕ್ರಮವಾಗಿ ಸಾಗಾಣಿಕೆಯಾಗುವುದನ್ನು ತಡೆಗಟ್ಟುವುದು ಸುಲಭ ಅಲ್ಲ. ಮೈನ್ಸ್ ಅಂಡ್ ಜಿಯಾಲಜಿ ಇನ್‌ಫ್ರಾಸ್ಟ್ರಕ್ಚರ್, ಮೈಸೂರು ಮಿನರಲ್ ಇನ್‌ಫ್ರಾಸ್ಟ್ರಕ್ಚರ್‌ನಿಂದ ಏನೇನು ಸಾಧ್ಯವಾಗುವುದಿಲ್ಲ. ಇದನ್ನು ನಾನು ದೂಷಣೆ ಮಾಡಲಿಕ್ಕೆ ಬಯಸುವುದಿಲ್ಲ. ಈಗ ಸರ್ಕಾರ ಪಾಲಿಸಿ ಏನು ಎರಡು ಮೂರು ತಿಂಗಳಲ್ಲಿ ಪಾಲಿಸಿ ತರುವುದರೊಳಗೆ ತಕ್ಷಣ ಹೊರ ದೇಶಕ್ಕೆ ಕಳುಹಿಸುವುದನ್ನು ನಿಲ್ಲಿಸಬೇಕು. ಪಟ್ಟಾ ಲ್ಯಾಂಡ್‌ನಲ್ಲಿ ಅತನು ಮಾಡಲಿಕ್ಕೆ ಅವಕಾಶ ಇದೆ. ಪಟ್ಟಾ ಸರ್ಕಾರದ ಜಮೀನು ಏನು ಇದೆ, ಅಲ್ಲಿ ಪಕ್ಕದಲ್ಲಿರತಕ್ಕ ಪಟ್ಟಾ ಲ್ಯಾಂಡ್ ಗುತ್ತಿಗೆಗೆ ತೆಗೆದುಕೊಳ್ಳುತ್ತಾರೆ. ಸರ್ಕಾರದ ಲ್ಯಾಂಡ್‌ನಲ್ಲಿರುವುದನ್ನು ಹೊಡೆಯುತ್ತಾರೆ. ಇದನ್ನು ತಾತ್ಕಾಲಿಕವಾಗಿ ಸರ್ಕಾರದವರು ನಿರ್ದಿಷ್ಟವಾಗಿ ಇದರ ಬಗ್ಗೆ ಪಾಲಿಸಿ ತರುವವರೆಗೂ ತಾತ್ಕಾಲಿಕವಾಗಿ ಏತಕ್ಕೆ ನಿಲ್ಲಿಸಬಾರದು, ಇದರ ಬಗ್ಗೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಶಿವಣ್ಣ.— ಆದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಗ್ರಾನೈಟ್ ಪಾಲಿಸಿ ಬರುತ್ತದೆ. ಅದರ ಬಗ್ಗೆ ತಮ್ಮ ಸಲಹೆಗಳನ್ನು ಸಹ ಕೊಡಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ.ರಾ.ರ.ಸಾ. ಸಂಸ್ಥೆ ಬಸ್ಸುಗಳು

೨೨೯. ಶ್ರೀ ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರು ಪರಿಸರದಲ್ಲಿ ಅತ್ಯಾಡಿ, ಗಂಗನಾಡು, ದೊಂಬೆ, ಮದ್ದೋಡಿ ಇತ್ಯಾದಿ ಹಳ್ಳಿಗಳಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ಸಂಚಾರ ಪ್ರಾರಂಭಿಸಿದೆಯೇ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಇ) ಈಗ ಭಟ್ಕಳದಿಂದ ಬೈಂದೂರಿಗೆ ಬರುವ ಅನೇಕ ಬಸ್ಸುಗಳು ಬೈಂದೂರಿನಲ್ಲಿ ತುಂಬ ವೇಳೆ ನಿಲ್ಲುವುದರಿಂದ, ಈ ಹಳ್ಳಿಗಳಿಗೆ ಹೋಗಿ ಬರುವಂತೆ ವ್ಯವಸ್ಥೆ ಮಾಡಲಾಗುವುದೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು).—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ದೊಂಬೆ, ಮತ್ತು ಮದ್ದೋಡಿ ಗ್ರಾಮಗಳಿಗೆ ಬಸ್ ಸೌಲಭ್ಯವನ್ನು ಒದಗಿಸಿದೆ.

ಆ) ತೋಡಳ್ಳಿ ಮತ್ತು ಅತ್ಯಾಡಿ ಗ್ರಾಮಗಳ ನಡುವಿನ (೨ ಕಿ.ಮೀ.) ರಸ್ತೆಯು ಬಸ್ ಸಂಚಾರಕ್ಕೆ ಯೋಗ್ಯವಲ್ಲದ ಕಾರಣ ಅತ್ಯಾಡಿ ಗ್ರಾಮಕ್ಕೆ ಬಸ್ ಸೌಲಭ್ಯ ಒದಗಿಸಲಾಗಲಿಲ್ಲ. ಗಂಗನಾಡು ಗ್ರಾಮವು ಖಾಸಗಿ ಬಸ್ಸುಗಳ ಸೌಕರ್ಯವನ್ನು ಹೊಂದಿದೆ.

ಇ) ಭಟ್ಕಳ ಬೈಂದೂರು ಮಾರ್ಗದಲ್ಲಿ ಹಾಲಿ ಸಂಚರಿಸುತ್ತಿರುವ ಸಾರಿಗೆಗಳ ಹೆಚ್ಚಿನ ವಿರಾಮ ವೇಳೆಯಿಲ್ಲದ ಕಾರಣ ಬೈಂದೂರಿನಿಂದ ಮುಂದೆ ವಿಸ್ತರಿಸಲು ಸಾಧ್ಯವಾಗುವುದಿಲ್ಲ.